ಮತ್ತು ಮಿವಾಕ್ ಪಂಗಡಗಳ ಬುಡಕಟ್ಟು ಜನರು ಹೆಚ್ಚಾಗಿದ್ದ ಆ ಪ್ರದೇಶ ಕ್ರಮೇಣ ವಿದೇಶೀಯರ ಕೈವಶವಾಯಿತು. ಮೂಲನಿವಾಸಿಗಳ ನಾಡಾಗಿ ಎಲೆಮರೆಯ ಕಾಯಿಯಂತಿದ್ದ ಯೋಸೆಮಿಟಿ ಕೇವಲ ಎರಡು ವರ್ಷಗಳ ಅವಧಿಯಲ್ಲಿ ಒಂದು ಲಕ್ಷಕ್ಕೂ ಅಧಿಕ ವಿದೇಶೀಯರ ಅತಿಕ್ರಮಣಕ್ಕೆ ಒಳಗಾಯಿತು. ಮೂರು ಲಕ್ಷಕ್ಕೂ ಹೆಚ್ಚಿದ್ದ ಮೂಲನಿವಾಸಿಗಳ ಸಂಖ್ಯೆ ಅರ್ಧಕ್ಕಿಂತಲೂ ಕಡಿಮೆಯಾಯಿತು.

ಮಾರಿಪೋಸಾ ಎಂಬ ಪಕ್ಕದ ಊರಿನಲ್ಲಿ ಮೂಲನಿವಾಸಿಗಳು ಹಾಗೂ ವಿದೇಶಿ ಆಕ್ರಮಣಕಾರರ ನಡುವೆ ನಡೆದ ಕದನದ ಬಳಿಕ ಮೂಲನಿವಾಸಿಗಳನ್ನು ಯೋಸೆಮಿಟಿ ಸರಹದ್ದಿನ ಆಚೆಗೆ ಓಡಿಸುವ ಕೆಲಸ ಅಧಿಕೃತವಾಗಿ ಆರಂಭವಾಯಿತು. ಅಹವನೀಚಿ ಪಂಗಡದ ಮುಖ್ಯಸ್ಥ ತೆನಾಯಾ ಎಂಬುವನ ನೇತೃತ್ವದಲ್ಲಿ ಮೂಲನಿವಾಸಿಗಳು ತಮ್ಮ ಹಕ್ಕಿಗಾಗಿ ಹೋರಾಡುತ್ತಿದ್ದರು. 1851ರಲ್ಲಿ ಅವರನ್ನು ಬಂಧಿಸಿ ಅವರಿಗಾಗಿಯೇ ಮೀಸಲಿಟ್ಟ ಜಾಗಕ್ಕೆ ಕಳಿಸಲಾಯಿತು. ಮುಂದೆ ಅವರು ಚಿಕ್ಕಪುಟ್ಟ ಕೂಲಿ ಕೆಲಸ, ಮೂಲ ಕಲೆ ಕಸುಬು, ಬುಟ್ಟಿ ಚಾಪೆಗಳನ್ನು ಹೆಣೆಯುವುದು, ಜನಪದ ನೃತ್ಯ ಮೊದಲಾದವುಗಳನ್ನು ಪ್ರವಾಸಿಗರ ಮುಂದೆ ಪ್ರದರ್ಶಿಸುವುದು ಮೊದಲಾದವುಗಳ ಮೂಲಕ ಯೋಸೆಮಿಟಿಯ ಆಗುಹೋಗುಗಳಲ್ಲಿ ಪಾಲ್ಗೊಳ್ಳತೊಡಗಿದರು.

1969ರಲ್ಲಿ ಅಲ್ಲಿಗೆ ರೈಲು ಯೋಜನೆ ಆರಂಭವಾಯಿತು. ಪ್ರವಾಸಿಗರ ಸಂಖ್ಯೆ ಏರತೊಡಗಿದಂತೆ ಅವರ ಅನುಕೂಲಕ್ಕಾಗಿ ಉತ್ತಮ ರಸ್ತೆ ಮತ್ತಿತರ ಮೂಲಸೌಕರ್ಯಗಳ ಅಭಿವೃದ್ಧಿಗಳಾದವು. 1890ರಲ್ಲಿ ಆ ಪ್ರದೇಶವನ್ನು ಯೋಸೆಮಿಟಿ ರಾಷ್ಟ್ರೀಯ ಉದ್ಯಾನ ಎಂದು ಘೋಷಿಸಲಾಯಿತು.

ಯೋಸೆಮಿಟಿಯ ನದಿಗಳಿಂದ ಹರಿಯುವ ನೀರನ್ನು ತಡೆದು ಹೇಚ್ ಹೇಚೀ (Hetch Hetchy) ಜಲಾಶಯವನ್ನು ನಿರ್ಮಿಸಿ ಅದರ ಮೂಲಕ ಸ್ಯಾನ್‌ಫ್ರಾನ್ಸಿಸ್ಕೋ ನಗರಕ್ಕೆ ನೀರು ಹಾಗೂ ವಿದ್ಯುತ್ ಪೂರೈಸುವ ಯೋಜನೆ 1903ರಲ್ಲಿ ಆರಂಭವಾಯಿತು. ಯೋಸೆಮಿಟಿ ರಾಷ್ಟ್ರೀಯ ಉದ್ಯಾನದಲ್ಲಿ ಸುಮಾರು 677600 ಎಕರೆ ಪ್ರದೇಶವನ್ನು 1984ರಲ್ಲಿ ವನ್ಯಜೀವಿಗಳಿಗಾಗಿ ಮೀಸಲಿಟ್ಟ ರಕ್ಷಿತ ಪ್ರದೇಶವೆಂದು ಘೋಷಿಸಲಾಗಿದೆ.

ಯೋಸೆಮಿಟಿ ಅಭಯಾರಣ್ಯದಲ್ಲಿ ಕೆರೆ, ಸರೋವರಗಳು ಸೇರಿ ಸಾವಿರಾರು ನೀರಿನ ಆಕರಗಳಿವೆ. ಮರ್ಸೆಡ್ ಮತ್ತು ಟ್ವಾಲಮಿ ಎಂಬ ಹೆಸರಿನ ಎರಡು ಪ್ರಮುಖ ನದಿಗಳಿವೆ. ನೂರು ಚದರ ಮೀಟರುಗಳಿಗಿಂತಲೂ ದೊಡ್ಡದಾದ 3200 ಕೆರೆಗಳಿವೆ. ಪೈನ್, ಫರ್, ಓಕ್, ಸೆಡಾರ್, ಸಿಕೋಯಾ ಮರಗಳು ಹೆಚ್ಚಾಗಿ ಬೆಳೆಯುತ್ತವೆ.

ಸಾಹಸಿಗಳಿಗೆ ಬಂಡೆ ಏರುವುದು ನೆಚ್ಚಿನ ಹವ್ಯಾಸ. ಎಲ್ ಕ್ಯಾಪಿಟಾನ್ (El Capitan) ಮತ್ತು ಹಾಫ್ ಡೋಮ್ (Half Dome) ಬಂಡೆಗಳು ಅದಕ್ಕೆ ಜನಪ್ರಿಯವೂ ಆಗಿವೆ. ಹೆಚ್ಚಿನ ಸಾಹಸಿಗಳು ಯಾವುದೇ ಆಧಾರವಿಲ್ಲದೇ ಬರಿಗೈಯಲ್ಲಿ ಬಂಡೆ ಏರುವುದು ವಿಶೇಷ.

ಯೋಸೆಮಿಟಿಯ ಹೊರಭಾಗದ ಸಮೀಪದ ಪಟ್ಟಣ ಮಾರಿಪೋಸಾ. ಅಲ್ಲಿ ಹಲವಾರು ಹೋಟೆಲ್‌ಗಳು, ವಸತಿಗೆ ಅನುಕೂಲವಾಗುವ ವ್ಯವಸ್ಥೆಗಳಿವೆ. ರಾಜ್ಯ ಹೆದ್ದಾರಿ 41ರಲ್ಲಿ ಯೋಸೆಮಿಟಿಯತ್ತ ಸಾಗಿ ಒಂದು ಸುರಂಗ ದಾಟುತ್ತಿದ್ದಂತೆ ಒಂದು ನಿಲುಗಡೆ (tunnel view) ಸಿಗುತ್ತದೆ. ಅಲ್ಲಿಂದ ಇಡಿಯ ಕಣಿವೆ, ಜಲಪಾತಗಳು, ಪ್ರಮುಖ ಬಂಡೆಗಳ ದರ್ಶನವಾಗುತ್ತದೆ. ಯೋಸೆಮಿಟಿಯಲ್ಲಿ ಎಲ್ಲ ಪ್ರಮುಖ ಸ್ಥಳಗಳನ್ನೂ ತೋರಿಸಿಕೊಂಡು ಬರುವ ಬಸ್ಸುಗಳ ವ್ಯವಸ್ಥೆಯಿದೆ. ನಿಧಾನವಾಗಿ ಸಾಗುತ್ತ, ನೋಡಬಹುದಾದ ಸ್ಥಳಗಳ ಸಮೀಪ ನಿರ್ದಿಷ್ಟ ಸಮಯದವರೆಗೆ ನಿಲ್ಲಿಸಿ ಪ್ರವಾಸಿಗರನ್ನು ಮರಳಿ ಮುಂದಿನ ಸ್ಥಳಕ್ಕೆ ಕರೆದುಕೊಂಡು ಹೋಗುವ ಸರ್ಕಾರಿ ಬಸ್ಸುಗಳು ತುಂಬ ಅನುಕೂಲಕರವಾಗಿವೆ. ಯೋಸೆಮಿಟಿಯಲ್ಲಿ ನೋಡಿ ಆನಂದಿಸಬಹುದಾದ ಪ್ರಮುಖ ತಾಣಗಳ ವಿವರ ಇಂತಿದೆ.

**ಎಲ್ ಕ್ಯಾಪಿಟಾನ್–** ಯೋಸೆಮಿಟಿಯ ಪ್ರಮುಖ ಹೆಬ್ಬಂಡೆ. ನೆಲಮಟ್ಟದಿಂದ ಸುಮಾರು 2900 ಅಡಿ ಎತ್ತರವಿದೆ. ಸ್ಪ್ಯಾನಿಷ್ ಭಾಷೆಯಲ್ಲಿ ಎಲ್ ಕ್ಯಾಪಿಟಾನ್, ಅಂದರೆ ಮುಖ್ಯಸ್ಥ ಎಂದರ್ಥ. ಆ ಬಂಡೆಯನ್ನು ಏರುವುದು ಸಾಹಸಿಗರ ನೆಚ್ಚಿನ ಹವ್ಯಾಸ. ಹೊಸಬರು ತರಬೇತುದಾರರ ಸಹಾಯ ಪಡೆದು ಹಗ್ಗ ಮತ್ತು ಸರಪಳಿಗಳ ಸಹಾಯದಿಂದ ಏರಿದರೆ, ನೈಪುಣ್ಯವಿದ್ದವರು ಬರಿಗೈಯಲ್ಲಿ ಬಂಡೆ ಏರುತ್ತಾರೆ. ಬಂಡೆ ನೇರವಾಗಿದ್ದು, ನೋಡಿದರೆ ಮೈ ಜುಂ ಎನ್ನಿಸುತ್ತದೆ. ಬಂಡೆಯ ಮೇಲ್ತುದಿಗೆ ತಲುಪುವ ನಡುವೆ ಅಲ್ಲಲ್ಲಿ ಒಬ್ಬ ಮನುಷ್ಯ ವಿಶ್ರಮಿಸುವಷ್ಟು ಜಾಗಗಳಿದ್ದು ಅಲ್ಲಿ ಸಾಹಸಿಗರು ರಾತ್ರಿ ಕಳೆಯುವುದೂ ಇದೆ.

**ಅರ್ಧಗೋಳ–** ಕಲ್ಲಂಗಡಿ ಹಣ್ಣನ್ನು ಮೇಲಿನಿಂದ ಕೆಳಗೆ ಎರಡು ಭಾಗ ಮಾಡಿ ನಿಲ್ಲಿಸಿದ ಹಾಗೆ ಅಥವಾ ಇಂಗ್ಲಿಷಿನ 'ಡಿ' ಅಕ್ಷರದ ಆಕಾರದಲ್ಲಿರುವ ಬಂಡೆ ಕೊಳ್ಳದ ನೆಲಮಟ್ಟದಿಂದ ಸುಮಾರು 4737 ಅಡಿ ಎತ್ತರವಿದೆ. ಮೂಲತಃ ಗೋಳಾಕಾರದ ತಲೆಯನ್ನು ಹೊಂದಿದ್ದ ಬಂಡೆಯು ಹಿಂದೆ ಯಾವುದೋ ಭೌಗೋಳಿಕ ಕಾರಣಗಳಿಂದಾಗಿ ಉತ್ತರ ಭಾಗದ ಅರ್ಧ ಭಾಗವು ಒಡೆದು ಹೋಳಾಗಿರಬೇಕೆಂದು ಅಂದಾಜಿಸಲಾಗಿದೆ. ಆ ಬಂಡೆಯನ್ನು ಏರುವುದು ಸಾಹಸಿಗರಿಗೆ ಪರಮಪ್ರಿಯ. ಚಾರಣಿಗರೂ ಸುಮಾರು 13 ಕಿ.ಮೀ. ಚಾರಣ ಮುಗಿಸಿ ಬಂಡೆಯ ತುದಿ ತಲುಪಬಹುದು. ಬಂಡೆ ಏರುವುದಕ್ಕೆ ಮೇಲಿನಿಂದ ಇಳಿಬಿಟ್ಟ ಹಗ್ಗ ಮತ್ತು ಸರಪಳಿಗಳು ಲಭ್ಯವಿವೆ. ಬಂಡೆ ಏರಲು ಮುಂಚಿತವಾಗಿ ಪರವಾನಗಿ ಪಡೆಯುವುದು ಅತ್ಯಗತ್ಯ. ಆ ಪರವಾನಗಿಗೆ ಅರ್ಜಿ ಸಲ್ಲಿಸಬೇಕು. ಪ್ರತಿದಿನ ಲಾಟರಿ ಮೂಲಕ ಪರವಾನಗಿ ನೀಡಲಾಗುತ್ತದೆ. 2010ರಲ್ಲಿ ಪರವಾನಗಿ ವ್ಯವಸ್ಥೆ ಜಾರಿಗೆ ಬರುವ ಮೊದಲು ದಿನಂಪ್ರತಿ ಸಾವಿರಕ್ಕೂ ಅಧಿಕ ಜನರು ನೆರೆಯುತ್ತಿದ್ದರು. ಈಗ ದಿನಕ್ಕೆ 300 ಪರವಾನಗಿಗಳನ್ನು ಮಾತ್ರ ವಿತರಿಸಲಾಗುತ್ತದೆ. ಹಾಗೆ ಅಪ್ಪಣೆಯಿಲ್ಲದೆ ಬಂಡೆ ಏರುವವರಿಗೆ ದಂಡ ಮತ್ತು ಶಿಕ್ಷೆ ವಿಧಿಸಬಹುದು.

**ಗ್ಲೇಸಿಯರ್ ಪಾಯಿಂಟ್–** ಯೋಸೆಮಿಟಿ ಕಣಿವೆಯ ದಕ್ಷಿಣ ಗೋಡೆಯ ತುದಿಗಿರುವ ತಾಣ. 7214 ಅಡಿ ಎತ್ತರದಿಂದ ಕೊಳ್ಳದ ಹಲವು ಜಾಗಗಳು ಸುಂದರವಾಗಿ ಕಾಣುತ್ತವೆ. ಆದರೆ ಆ ರಸ್ತೆಯು ವರ್ಷದ ಎಲ್ಲ ಕಾಲದಲ್ಲಿಯೂ ತೆರೆದಿರುವುದಿಲ್ಲ. ಚಳಿಗಾಲದಿಂದ ಆರಂಭಿಸಿ ಮೇ ಜೂನ್ ತನಕವೂ ಪ್ರವಾಸಿಗರಿಗೆ ಮುಚ್ಚಿರುತ್ತದೆ.

**ಮೌಂಟ್ ಡೇನಾ–** ಆ ಪರ್ವತವು ಯೋಸೆಮಿಟಿಯ ಪೂರ್ವಭಾಗದ ಗಡಿ ಎನ್ನಬಹುದು. ಸುಮಾರು 13000 ಅಡಿ ಎತ್ತರದ ಪರ್ವತವು ಬಂಡೆಗಳನ್ನೂ ಚಿಕ್ಕ ಹಿಮನದಿಯನ್ನೂ ಒಳಗೊಂಡಿದೆ. ಪರ್ವತಕ್ಕೆ ಚಾರಣ ಮಾರ್ಗ ಗುರುತಿಸಲಾಗಿದ್ದು, ಹಲವಾರು ಸಾಹಸಿಗರು ಆ ಸಾಹಸಕ್ಕೆ ಹೋಗುತ್ತಾರೆ.


'ತ್ರೀ ಬ್ರದರ್ಸ್' ಬಂಡೆ